ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

## ಹೀಗೊಂದು ಮನವಿ

ಆತ್ಮೀಯರೆ,

**ವಿಷಯ: ರಾಜ್ಯದ ಸರ್ಕಾರಿ ಶಾಲೆಗಳನ್ನು ಉತ್ತಮ ಗುಣಮಟ್ಟದ ಶಿಕ್ಷಣ ಕೇಂದ್ರಗಳಾಗಿ ರೂಪಿಸಲು ಉದ್ದೇಶಿಸಿರುವ 'ಶಾಲಾ ಪೋಷಣೆ ಯೋಜನೆ'ಯಲ್ಲಿ ಪಾಲ್ಗೊಳ್ಳುವಂತೆ ನಿಮ್ಮನ್ನು ಆಹ್ವಾನಿಸುವುದು**

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಹಾಗೂ ಶಾಲಾ ವಾತಾವರಣವನ್ನು ಆಕರ್ಷಕಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯು **'ಶಾಲೆಗಾಗಿ ನಾವು-ನೀವು'** ಎಂಬ ಶಾಲಾ ಪೋಷಣೆ ಯೋಜನೆ ರೂಪಿಸಿದೆ. ಇದು ಸಮಯದಾಯದ ಸಹಭಾಗಿತ್ವದ ಕಾರ್ಯಕ್ರಮವಾಗಿದ್ದು ಇದಕ್ಕೆ ನಿಮ್ಮಂತಹ ಸಹೃದಯರ ಸಹಕಾರ ಅಗತ್ಯವಿದೆ.

ರಾಜ್ಯದಲ್ಲಿ ಒಟ್ಟು 48,987 ಶಾಲೆಗಳು ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದ್ದು, ಈ ಶಾಲೆಗಳಲ್ಲಿ ಕಲಿಯುವ ಒಂದು ಕೋಟಿಗೂ ಹೆಚ್ಚು ಮಕ್ಕಳು ಸಮಾಜದ ಕೆಳಸ್ತರ ಹಾಗೂ ಮಧ್ಯಮ ವರ್ಗಕ್ಕೆ ಸೇರಿದ್ದಾರೆ. ಈ ಮಕ್ಕಳು ಹಾಗೂ ಪೋಷಕರು ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಸರಿಸಮಾನವಾದ ಸೌಲಭ್ಯಗಳನ್ನು ಅಪೇಕ್ಷಿಸುತ್ತಾರೆ. ಆದರೆ, ಎಲ್ಲ ಶಾಲೆಗಳಿಗೆ ಒಂದೇ ಬಾರಿಗೆ ಈ ಸೌಲಭ್ಯಗಳನ್ನು ಒದಗಿಸಲು ಸರ್ಕಾರದಿಂದ ಕಷ್ಟಸಾಧ್ಯ. ಈಗಾಗಲೇ ಸರ್ಕಾರ ಕೇಂದ್ರ ಪುರಸ್ಕೃತ ಯೋಜನೆ ಮೂಲಕ ಹಾಗೂ ರಾಜ್ಯದ ಆಯವ್ಯಯದಲ್ಲಿ ಸಾಕಷ್ಟು ಅನುದಾನವನ್ನು ನೀಡುತ್ತಿದೆ. 2008–09ನೇ ಸಾಲಿನ ಆಯವ್ಯಯದಲ್ಲಿ ರೂ.7500/– ಕೋಟಿಗಳನ್ನು ಒದಗಿಸಲಾಗಿದೆ. ಜೊತೆಗೆ ಉಚಿತ ಪುಸ್ತಕ, ಸಮವಸ್ತ್ರ, ಬಿಸಿಯೂಟ, ಸೈಕಲ್ ಇತ್ಯಾದಿಗಳನ್ನೂ ಒದಗಿಸುತ್ತಿದೆ.

ನಮ್ಮ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಉತ್ತಮ ಭೌತಿಕ ಸೌಲಭ್ಯಗಳೊಂದಿಗೆ ನೀಡುವುದರ ಮೂಲಕ ಅವರನ್ನು ರಾಷ್ಟ್ರದ ಸತ್ಪ್ರಜೆಯನ್ನಾಗಿ ಮಾಡಬೇಕೆಂಬುದು ನಮ್ಮ ಸರ್ಕಾರದ ಆಶಯ. ಈ ಮಕ್ಕಳ ಭವಿಷ್ಯ ಉಜ್ವಲವಾಗಲು ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇತರೆ ಮಕ್ಕಳೊಂದಿಗೆ ಸಮಾನ ನೆಲೆಯಲ್ಲಿ ನಿಲ್ಲುವಂತಾಗಲು ನಾವು ಅಭಿವೃದ್ಧಿ ಪಥದಲ್ಲಿ ಸಾಗಬೇಕಿದೆ. ಈ ಪಯಣದಲ್ಲಿ ಸರ್ಕಾರದ ಜೊತೆಗೆ ಸಮುದಾಯವೂ ಹೆಜ್ಜೆಹಾಕಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ.



ಆದ್ದರಿಂದ, ನೀವು ನಮ್ಮೊಂದಿಗೆ ಕೈಜೋಡಿಸಿ ಎಂದು ಈ ಮೂಲಕ ಕೋರುತ್ತಿದ್ದೇವೆ.

ನೀವು ಕಲಿತ ಶಾಲೆ ಅಥವಾ ನಿಮ್ಮೂರ ಶಾಲೆ ಅಥವಾ ನಿಮ್ಮ ವಾಸ ಸ್ಥಳಕ್ಕೆ ಸಮೀಪ ಇರುವ ಶಾಲೆ ಅಥವಾ ರಾಜ್ಯದ ಯಾವುದೇ ಸರ್ಕಾರಿ ಶಾಲೆಯ ಭೌತಿಕ ಮತ್ತು ಬೌದ್ಧಿಕ ಅಭಿವೃದ್ಧಿಗೆ ನೀವು ನೆರವು ನೀಡಬಹುದು.

ಶಾಲೆಯ ಆಯ್ಕೆ, ನೆರವಿನ ರೀತಿ, ನೆರವಿನ ಪ್ರಮಾಣ ಇತ್ಯಾದಿಗಳನ್ನು ನಿರ್ಧರಿಸಲು ಅಗತ್ಯವಿದ್ದಲ್ಲಿ ಸಹಕಾರ ನೀಡಲು ನಾವು ಸಿದ್ಧ. ನಿಮ್ಮ ಅಭಿಲಾಷೆಯನ್ನು ನಮಗೆ ತಿಳಿಸಿದರೆ ಸಾಕು, ನಾವು ಓಗೊಡುತ್ತೇವೆ.

ನಿಮ್ಮ ವಿಶ್ವಾಸಿ,

ವಿಶ್ವೇಶ್ವರ ಹೆಗಡೆ ಕಾಗೇರಿ
ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

**ಶಾಲೆಗಾಗಿ ನಾವು–ನೀವು**
**School Nurturing Programme**

ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು 560001 ದೂರವಾಣಿ: +91–80–22123260
ಇಮೇಲ್: nurturer.edu.sgkar@nic.in ಅಂತರ್ಜಾಲ: www.schooleducation.kar.nic.in/schoolnurturing.htm